**ಗುಂಡ:** ಹಿಂದಿನ ರಸ್ತೆಯ ಗೋಪಿ ಮತ್ತು ಲೀಲಾ, ಇಬ್ಬರೂ ಒಂದೇ ಹಗ್ಗದಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರಂತೆ ಗೊತ್ತಾ?
**ಗೆಳೆಯ:** ಅಯ್ಯೋ ದೇವರೇ ಅವರು ಯಾಕೆ ಹಾಗೆ ಮಾಡಿಕೊಂಡರು? ಅವರ ಆತ್ಮಕ್ಕೆ ಶಾಂತಿ ಸಿಗಲಿ.
**ಗುಂಡ:** ಹೇ ನಾನು ಹೇಳಿದ್ದು ಅವರಿಬ್ಬರು ಮದುವೆಯಾದರು ಅಂತ.

**ಅಕ್ಕ:** ‘ಮುಂದಿನ ತಿಂಗಳ 2ನೇ ತಾರೀಕು ನನ್ನ ಮದುವೆ. 1ನೇ ತಾರೀಕು ರಾತ್ರಿನೇ ಬನ್ನಿ’ ಅಂತ ಇಂಗ್ಲಿಷಿನಲ್ಲಿ ಹಾಕ್ಬೇಕು. ಅದನ್ನು ಹೇಗೆ ಟೈಪ್ ಮಾಡುವುದು?
**ತಮ್ಮ:** ಅಷ್ಟೇ ತಾನೇ? ಸೆಕೆಂಡ್ ಮ್ಯಾರೇಜ್! ಕಮ್ ಆನ್ ಫಸ್ಟ್ ನೈಟ್ ಅಂತ ಹಾಕಿದರಾಯಿತು.

**ತಂದೆ:** (ಸಿಟ್ಟಿನಿಂದ) ಎಲ್ಲದರಲ್ಲೂ ನೀನು ಮೂರ್ಖ, ದಡ್ಡ, ವಿವೇಕಹೀನ. ಕೋಡಂಗಿಯನ್ನು ಎಲ್ಲಾದರೂ ನೋಡಿದ್ದೀಯಾ?
**ಮಗ:** (ತಲೆ ತಗ್ಗಿಸಿ) ಇಲ್ಲ ಅಪ್ಪ ನೋಡಿಲ್ಲ.
**ತಂದೆ:** ತಲೆ ತಗ್ಗಿಸಬೇಡ. ನನ್ನನ್ನು ನೋಡಿ ಹೇಳು.

**ಸುಬ್ಬ:** ವಿಷಯ ಗೊತ್ತಾಯ್ತಾ? ಹಿಂದಿನ ರಸ್ತೆಯ ಗೀತಾ ಯಾರ ಜೊತೆನೋ ಓಡಿಹೋಗಿದ್ದಾಳಂತೆ.
**ಮಬ್ಬ:** ಅರೆ ಹೌದಾ? ನನ್ನ ಹೆಂಡತಿ ಊರಲ್ಲಿ ಇಲ್ವಲ್ಲ. ಅದಕ್ಕೆ ಗೊತ್ತಾಗಲಿಲ್ಲ.




**ತಮ್ಮ:** ಅಕ್ಕ, ನಿನಗೆ 9 ತಿಂಗಳಂತೆ ಹೌದಾ?
**ಅಕ್ಕ:** ಹೌದು ಕಣೋ, ಯಾಕೆ ಕೇಳುತ್ತಿದ್ದೀಯಾ?
**ತಮ್ಮ:** ಏನಿಲ್ಲ. ಮತ್ತೆ ನೀನು ನನ್ನ ಅಕ್ಕ ಹೇಗಾದೆ ಅಂತ ಅನುಮಾನ ಬಂತು. ಅದಕ್ಕೆ ಕೇಳ್ದೆ.


**ಗೆಳೆಯ:** ಏನೋ ಗುಂಡ ನಿನಗೆ ಸಿಕ್ಕ ಚೆಕ್ಕನ್ನು ನೆಲದ ಮೇಲಿಟ್ಟು ಯಾಕೆ ನೋಡುತ್ತಿದ್ದೀಯಾ?
**ಗುಂಡ:** ಅದು ಬೌನ್ಸ್ ಆಗುತ್ತದೆಯೋ ಇಲ್ಲವೋ ಅಂತ ಚೆಕ್ ಮಾಡ್ತಾ ಇದೀನಿ.

**ಹೆಂಡತಿ:** ಮುಂದಿನ ವಾರ ಬಿಡುಗಡೆಯಾಗೋ ಸಿನಿಮಾಕ್ಕೆ ಈಗಲೇ ಯಾಕೆ ಟಿಕೆಟ್ ತಂದಿದ್ದೀರಿ?
**ಗುಂಡ:** ಏನು ಮಾಡಲಿ. ನಿನ್ನ ಮೇಕಪ್ ಮುಗಿಯಲಿಕ್ಕೆ ಅಷ್ಟಾದ್ರೂ ಟೈಮ್ ಬೇಕಲ್ವಾ, ಅದಕ್ಕೆ.

**ತಂದೆ:** ಗಣೇಶ, ನಿನ್ನ ಶಾಲೆಗೆ ಬಂದಿರೋ ಹೊಸ ಟೀಚರ್ ಹೆಸರೇನು?
**ಗಣೇಶ:** ಅಪ್ಪ. ನಾವಿನ್ನೂ ಅವರಿಗೆ ಹೆಸರಿಟ್ಟಿಲ್ಲ.

**ಗೆಳೆಯ:** ಗುಂಡ, ನಾನು ನಿನಗೊಂದು ಒಳ್ಳೆಯ ಹುಡುಗಿ ನೋಡಿದ್ದೇನೆ. ತುಂಬಾ ರೂಪವಂತೆ.
**ಗುಂಡ:** ಹೌದೇನೋ? ಹುಡುಗಿ ಹೆಸರೇನು?
**ಗೆಳೆಯ:** ಸಿಹಿ ಅಂತ.
**ಗುಂಡ:** ಅಯ್ಯೊ ಬೇಡ ಕಣೋ.
**ಗೆಳೆಯ:** ಅರೆ ಯಾಕೆ ಬೇಡಾ?
**ಗುಂಡ:** ನಾನು ಡಯಾಬಿಟಿಕ್ ಪೇಷಂಟ್ ಅಂತ ನಿನಗೆ ಗೊತ್ತಿಲ್ವಾ, ಅದಕ್ಕೆ ಬೇಡ.

**ಗುಂಡ:** (ಫೋನಿನಲ್ಲಿ) ನಮಸ್ಕಾರ ಸಾರ್! ನನ್ನ ಕಾರಿನ ಸ್ಟೀರಿಯೊ, ಹಾರ್ನ್, ಬ್ರೇಕ್, ಪುಟ್ಟ ಟಿ.ವಿ., ಎಲ್ಲಾ ಕಳುವಾಗಿದೆ.
**ಪೊಲೀಸ್:** ಅರೆ ಹೌದಾ? ಅಲ್ಲೇ ಇರಿ. ಹತ್ತು ನಿಮಿಷದಲ್ಲಿ ಬರುತ್ತೇನೆ.
**ಗುಂಡ:** (ಐದು ನಿಮಿಷ ಬಿಟ್ಟು) ಸಾರ್ ಈಗ ನೀವು ಬರುವುದು ಬೇಡ. ನನ್ನ ಕಾರಿನಲ್ಲಿ ಏನೂ ಕಳುವಾಗಿಲ್ಲ. ನಾನು ಮರೆತು ಹಿಂದಿನ ಸೀಟಿನಲ್ಲಿ ಕುಳಿತಿದ್ದೆ.



15% ಬಸ್ ರೇಟ್ ಜಾಸ್ತಿ ಅಂತಾ ಕೊರಗಬೇಡಿ, ಇಲ್ಲಿ ಒಂದು ಸೀರೆ ತೊಗೊಂಡ್ರೆ ಸರಿಯಾಗುತ್ತೆ ನಡೀರಿ...!!

**ಗೆಳೆಯ:** ಆಕಳಿಕೆ ಎಂಬುದರ ಅರ್ಥವೇನು?
**ಗುಂಡ:** ಮದುವೆಯಾದ ಗಂಡಸರಿಗೆ ಬಾಯಿ ತೆರೆಯುವುದಕ್ಕೆ ಇರುವ ಒಂದೇ ಒಂದು ಮುಕ್ತ ಅವಕಾಶ.

**ತಿಮ್ಮ:** ನಿಜವಾಗಿಯೂ ಸಿಂಹಗಳಿಗೆ ಹಾಸ್ಯ ಮನೋಭಾವ ಇದೆ ಕಣೋ.
ಗೆಳೆಯ: ಅದು ಹೇಗೆ?
**ತಿಮ್ಮ:** ಜೂನಲ್ಲಿ ಅವುಗಳ ಮುಂದೆ ಒಂದು ಜೋಕ್ ಹೇಳಿದೆ. ಅದ್ಕೆ ಕೋಪ ಮಾಡ್ಕೊಂಡು ಅವು ಗರ್ಜಿಸಿದ್ವು.

**ವೈದ್ಯ:** ನಿನ್ನೆ ರಾತ್ರಿ ಈ ರೋಗಿಗೆ ನಾರ್ಮಲ್ ಇದ್ದ ಬಿ.ಪಿ. ಈಗ ಇದ್ದಕ್ಕಿದ್ದ ಹಾಗೆ ಏರಿದೆಯಲ್ಲ ಯಾಕೆ?
**ನರ್ಸ್:** ಡಾಕ್ಟ್ರೇ, ಆತ ಇವತ್ತಿನ ಪೇಪರಿನಲ್ಲಿ ತೊಗರಿ ಬೇಳೆ ಬೆಲೆ ನೋಡಿರಬೇಕು ಅದ್ಕೆ.

**ಗುಂಡ:** ನಿನ್ನೆ ನಮ್ಮ ಮನೆಗೆ ಬಂದು ಹೋದ ಭಿಕ್ಷುಕನನ್ನು ನೋಡಿದರೆ ನನಗೆ ಹೊಟ್ಟೆ ಉರಿಯುತ್ತದೆ.
**ಗೆಳೆಯ:** ಯಾಕೆ?
**ಗುಂಡ:** ಮತ್ತಿನ್ನೇನು! ನನ್ನ ಹೆಂಡತಿ ಹಾಕಿದ ಅಡುಗೆಯನ್ನು ತಿಂದು ಸ್ವಲ್ಪವೂ ಚೆನ್ನಾಗಿಲ್ಲವೆಂದು ಬಾಯಿಗೆ ಬಂದಹಾಗೆ ಬೈದು ಹೋದ. ಆದರೆ ನಾನು ಬೈಯುವ ಹಾಗಿಲ್ಲವಲ್ಲ ಅದಕ್ಕೆ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು